# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು-572 103

ದಿನಾಂಕ:20.06.2026

ಸಂಖ್ಯೆ:ತು.ವಿ:ಅ.ವಿ:2026-27/1046

## : ಸುತ್ತೋಲೆ :

ವಿಷಯ : ದಿನಾಂಕ:21.06.2026 ರಂದು ಆಯೋಜಿಸುವ "12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ" ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:19.06.2026 (ಕಂಡಿಕೆ-91)

* * * * *

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:21.06.2026 ರ ಭಾನುವಾರದಂದು ಬೆಳಿಗ್ಗೆ 06.45 ಗಂಟೆಗೆ ಶೈಕ್ಷಣಿಕ ಭವನದ ಮುಂಭಾಗ, ಜ್ಞಾನಸಿರಿ ಕ್ಯಾಂಪಸ್, ಬಿದರಕಟ್ಟೆ, ಕುಣಿಗಲ್ ರಸ್ತೆ, ತುಮಕೂರು ಇಲ್ಲಿ "12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ" ಮತ್ತು "ನಮ್ಮ ನಡಿಗೆ ಯೋಗದ ಕಡೆಗೆ" ಜಾಥಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಪ್ರೊ. ಎಂ. ವೆಂಕಟೇಶ್ವರಲು, ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ವಹಿಸಲಿದ್ದು, ಕಾರ್ಯಕ್ರಮದಲ್ಲಿ ಶ್ರೀಮತಿ ನಾಹಿದಾ ಜಮ್ ಜಮ್ ಕೆ.ಎ.ಎಸ್., ಕುಲಸಚಿವರು ಹಾಗೂ ಪ್ರೊ. ಮೋಹನ ಎಚ್.ಎಸ್., ಕುಲಸಚಿವರು(ಪರೀಕ್ಷಾಂಗ) ಮತ್ತು ಶ್ರೀ ನರಸಿಂಹಮೂರ್ತಿ, ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರುಗಳು ಉಪಸ್ಥಿತರಿರಲಿದ್ದಾರೆ.

ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಸಿಂಡಿಕೇಟ್ ಸದಸ್ಯರು ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು ಭಾಗವಹಿಸಲು ಕೋರಿದೆ.

ಮುಂದುವರೆದು, ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗಗಳ ಆಡಳಿತಾಧಿಕಾರಿಗಳು, ಎಲ್ಲಾ ನಿಕಾಯಗಳ ಡೀನರು, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರು/ಸಂಯೋಜಕರುಗಳು ಮತ್ತು ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಬೋಧಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ತಿಳಿಸಲಾಗಿದೆ.

ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳ ಎನ್.ಸಿ.ಸಿ./ ಎನ್.ಎಸ್.ಎಸ್./ಸ್ಕೌಟ್ಸ್ & ಗೈಡ್ಸ್/ರೋವರ್ಸ್ ಮತ್ತು ರೇಂಜರ್ಸ್/ಯುವ ರೆಡ್‌ಕ್ರಾಸ್/ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸಲು ಸಂಬಂಧಪಟ್ಟ ಘಟಕಗಳ ಮುಖ್ಯಸ್ಥರು ಅಗತ್ಯ ಕ್ರಮವಹಿಸುವುದು.

<u>ವಿಶೇಷ ಸೂಚನೆ</u> : ಸೂಚಿತ ಸ್ಥಳದಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಸಿಬ್ಬಂದಿಗಳು ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನ, ಬಿ. ಹೆಚ್. ರಸ್ತೆ, ಭದ್ರಮ್ಮ ವೃತ್ತ, ತುಮಕೂರು ಇಲ್ಲಿ ಸರ್ಕಾರದ ವತಿಯಿಂದ ಆಯೋಜಿಸುವ ಯೋಗ ದಿನಾಚರಣೆಯಲ್ಲಿ ಭಾಗವಹಿಸಬಹುದಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಕರಡು ಪ್ರತಿ ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.

ಗೆ,

1. ಮಾನ್ಯ ಸಿಂಡಿಕೇಟ್ ಸದಸ್ಯರು ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಮಾನ್ಯ ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

4. ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಡೀನರು, ಕಲಾ, ವಿಜ್ಞಾನ & ತಂತ್ರಜ್ಞಾನ, ವಾಣಿಜ್ಯ & ನಿರ್ವಹಣಾಶಾಸ್ತ್ರ, ಶಿಕ್ಷಣ ಮತ್ತು ಕಾನೂನು ನಿಕಾಯಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಂಯೋಜಕರು, ಜ್ಞಾನಸಿರಿ ಕ್ಯಾಂಪಸ್, ತುಮಕೂರು ವಿಶ್ವವಿದ್ಯಾನಿಲಯ, ಬಿದರಕಟ್ಟೆ.
8. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ಜ್ಞಾನಸಿರಿ ಕ್ಯಾಂಪಸ್, ತುಮಕೂರು ವಿಶ್ವವಿದ್ಯಾನಿಲಯ, ಬಿದರಕಟ್ಟೆ.
9. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಉಪಕುಲಸಚಿವರು, ಸಾಮಾನ್ಯ ಮತ್ತು ಖರೀದಿ ಕೋಶ/ಅಭಿವೃದ್ಧಿ ವಿಭಾಗ/ಸಿಬ್ಬಂದಿ ವಿಭಾಗ/ಶೈಕ್ಷಣಿಕ ವಿಭಾಗ/ಸಿಂಡಿಕೇಟ್ ವಿಭಾಗ/ಕಾನೂನು ಕೋಶ/ಪರೀಕ್ಷಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
11. ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
12. ನಿರ್ದೇಶಕರು, IQAC, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
13. ನೋಡಲ್ ಅಧಿಕಾರಿಗಳು, RUSA, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
14. ನಿರ್ದೇಶಕರು, PMEB, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
15. ನಿರ್ದೇಶಕರು, ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
16. ನಿರ್ದೇಶಕರು, ಸಂಶೋಧನೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
17. ಎಸ್ಟೇಟ್ ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
18. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
19. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
20. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
21. ಗ್ರಂಥಪಾಲಕರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
22. ನಿರ್ದೇಶಕರು/ಸಂಯೋಜಕರು, ವಿಶ್ವವಿದ್ಯಾನಿಲಯದ ವಿವಿಧ ಕೇಂದ್ರಗಳು/ಪೀಠಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
23. ಸಂಚಾಲಕರು, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು : **ಕಾರ್ಯಕ್ರಮ ಆಯೋಜನೆಗೆ ಅಗತ್ಯ ಕ್ರಮವಹಿಸುವುದು.**
24. ಸಂಚಾಲಕರು, ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
25. ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ಕೋಶ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
26. ಎಲ್ಲಾ ನಿಲಯಪಾಲಕರು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
27. ಮುಖ್ಯಸ್ಥರು, ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳ ಎನ್.ಸಿ.ಸಿ./ಎನ್.ಎಸ್.ಎಸ್./ಸ್ಕೌಟ್ಸ್ & ಗೈಡ್ಸ್/ ರೋವರ್ಸ್ ಮತ್ತು ರೇಂಜರ್ಸ್/ಯುವ ರೆಡ್‌ಕ್ರಾಸ್ ಘಟಕ.
28. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ **ಪ್ರಕಟಿಸಲು ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಇ-ಮೇಲ್ ಕಳುಹಿಸಲು ಅಗತ್ಯ ಕ್ರಮವಹಿಸುವುದು.**
29. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
30. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
31. ಕಚೇರಿ ಪ್ರತಿ.

**(ಸೂಚನೆ : ತಮ್ಮ ಅಧೀನದ ಎಲ್ಲಾ ಬೋಧಕ/ಬೋಧಕೇತರ/ಇತರೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರುವುದು.)**